ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ಸಾವಿರಾರು ಜನ ಖೈದಿಗಳಿದ್ದಾರೆ. ಅವರ ವಿನಂತಿ ಏನೆಂದರೆ, ಬೇರೆ ರಾಜ್ಯಗಳಲ್ಲಿ ಅವರ ನಡತೆ ನೋಡಿ ಮಾಡಿರುವಂಥ ಶಿಕ್ಷೆಯನ್ನು ಕಡಿಮೆ ಮಾಡಿ ಅವರನ್ನು ಆಗಸ್ಟ್ 15 ಮತ್ತು ಜನವರಿ 26 ರಂದು ಬಿಡುವಂಥ ಪದ್ಧತಿ ಇದೆ. ಆ ರೀತಿ ಯಾರು ಒಳ್ಳೆಯ ನಡತೆಯಿಂದಿದ್ದಾರೆ. ಅವರಿಗೆ ಶಿಕ್ಷೆ ಕಡಿಮೆ ಮಾಡಿ ಅವರಿಗೇನಾದರೂ ರಿಲೀಫ್ ಕೊಡುವುದರ ಬಗ್ಗೆ ಸರ್ಕಾರ ಯೋಚನೆ ಏನಾದರೂ ಮಾಡಬಹುದೇ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಅವರಿಗೆ ಅಲ್ಲಿ ಅಶ್ಯೂರೆನ್ಸ್ ಕೊಟ್ಟು ಬಂದಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ, 1978ರಲ್ಲಿ ಇವರ ಅಮೆಂಡ್‌ಮೆಂಟ್ ಆಗತಕ್ಕಂಥದ್ದು ಇತ್ತು. ಆಗಿನ ಕಾಲದಲ್ಲಿ ರಾಜ್ಯ ಸರ್ಕಾರದಲ್ಲಿದ್ದಂಥ ಶ್ರೀಮಾನ್ ದೇವರಾಜ್ ಅರಸುರವರು ಇದನ್ನು ಶಿಫಾರಸ್ಸು ಮಾಡಿದ್ದರು. ಯಾರ ನಡವಳಿಕೆ ಚೆನ್ನಾಗಿದೆ ಎನ್ನತಕ್ಕಂಥ ರೀತಿಯಲ್ಲಿ 26ನೇ ತಾರೀಕು ಜನವರಿಯಲ್ಲಿ ಮತ್ತು 15ನೇ ಆಗಸ್ಟ್ ಸಂದರ್ಭದಲ್ಲಿ ಕೆಲವು ಖೈದಿಗಳನ್ನು ಬಿಡತಕ್ಕಂಥದ್ದು ಇದೆ ಮತ್ತು ಬಿಡುತ್ತಾ ಬಂದಿದ್ದೇವೆ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಾವೇನೂ ಕೂಡ ಯಾರಿಗೂ ಜೈಲಿಗೆ ಕಳುಹಿಸತಕ್ಕಂಥ ಪ್ರಯತ್ನವನ್ನು ನಾವು ಏಕೆ ಮಾಡೋಣ? ನೀವಾಗಿಯೇ ನೀವು ಹೋಗುತ್ತಿದ್ದೀರಿ, ಅದು ಹೋಗಿರುವುದು ಸರಿಯಾಗಿಯೇ ಇತ್ತು ಕೆಲವು ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತಂದಿದ್ದಿರಿ.

ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ಸುಧಾರಣೆ

28 (49) : ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಧೋಳ ತಾಲ್ಲೂಕಿನಲ್ಲಿ ಸವಳು ಜವಳಿನಿಂದ ಹಾನಿಗೊಳಗಾದ ಭೂಮಿಯ ವಿಸ್ತೀರ್ಣ ಎಷ್ಟು: (ವಿವರಗಳನ್ನು ಎಕರೆಗಳಲ್ಲಿ ನೀಡುವುದು);

ಆ) ಸವಳು ಜವಳಿನಿಂದ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರ ಬಸಿಗಾಲುವೆಗಳನ್ನು ನಿರ್ಮಾಣಮಾಡಿ ಸುಧಾರಣೆಗಳನ್ನು ಮಾಡಲು ಸರ್ಕಾರ ಹಾಕಿಕೊಂಡಿರುವ ಯೋಜನೆಯ ವಿವರಗಳನ್ನು ನೀಡುವುದು;

ಇ) ಈ ಯೋಜನೆಯ ಒಟ್ಟು ಮೊತ್ತವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮುಧೋಳ ತಾಲ್ಲೂಕಿನಲ್ಲಿ ಒಟ್ಟು 11092.31 ಎಕರೆಯಷ್ಟು ಭೂಮಿಯು ಸವಳು ಜವಳುನಿಂದ ಹಾನಿಗೊಳಗಾಗಿದೆ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳನುಸಾರ ಹಾನಿಗೊಳಗಾದ ಕ್ಷೇತ್ರದಲ್ಲಿ ಅಂತರಬಸಿಗಾಲುವೆಗಳನ್ನು ನಿರ್ಮಾಣ ಮಾಡಿ ಸುಧಾರಣೆಗಳನ್ನು ಮಾಡಲು ಪ್ರಸ್ತಾವನೆಗಳನ್ನು ತಯಾರಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಕೇಂದ್ರ ಸರ್ಕಾರದ ಅನುಮೋದನೆ ಪಡೆದ ನಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದರಂತೆ ಪ್ರಸ್ತಾವನೆಗಳನ್ನು ತಯಾರಿಸುತ್ತಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ಈ ಕಾರ್ಯಕ್ರಮವನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಅನುಷ್ಠಾನಗೊಳಿಸಲಾಗುವುದು.

ಮುಧೋಳ ತಾಲ್ಲೂಕಿನ 11092.31 ಎಕರೆ ವಿಸ್ತೀರ್ಣದಲ್ಲಿ ಇಲ್ಲಿ ತನಕ 381.24 ಎಕರೆ ಕ್ಷೇತ್ರವನ್ನು ಸುಧಾರಿಸಲಾಗಿದೆ.

ಇ) ಬಾಕಿ ಉಳಿದ 10711.07 ಎಕರೆ ಕ್ಷೇತ್ರ ಸುಧಾರಣೆಗೆ ರೂ. 1734.60 ಲಕ್ಷಗಳು ಬೇಕಾಗುತ್ತದೆ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದು ಅದು ನನಗೆ ತೃಪ್ತಿಕರವಾಗಿಲ್ಲ. ಮುಧೋಳ ತಾಲ್ಲೂಕಿನ ಒಟ್ಟು ಜಮೀನಿನಲ್ಲಿ 5240 ಹೆಕ್ಟೇರ್ ಪ್ರದೇಶದಲ್ಲಿ ಸವಳು-ಜವಳಾಗಿದೆ. ಆ ಸವಳು-ಜವಳನ್ನು ತೆಗೆಯುವುದಕ್ಕೆ ಸರ್ಕಾರ ಹಾಕಿಕೊಂಡಂಥ ಕಾರ್ಯಕ್ರಮಗಳೇನು ಎಂದು ನಾನು ಪ್ರಶ್ನೆ ಕೇಳಿದ್ದೆ. 'ಅನುದಾನದ ಆಧ್ಯತೆ ಮೇಲೆ ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಕಳುಹಿಸಿ ಒಪ್ಪಿಗೆ ಪಡೆದು ಮಾಡುತ್ತೇವೆಂದು' ಉತ್ತರದಲ್ಲಿ ತಿಳಿಸಿದ್ದಾರೆ. ಇಲ್ಲಿ ಬಡ ರೈತರಿಗೆ ಸಂಬಂಧಿಸಿದ ಬಹಳ ಬೆಲೆಬಾಳುವಂಥ ಜಮೀನಾಗಿರುತ್ತದೆ. ಕೇಂದ್ರ ಸರ್ಕಾರದ ಯೋಜನೆ ಒಂದೆರಡು ವರ್ಷದಲ್ಲಿ ಬರುವುದಿಲ್ಲ. ಈಗಾಗಲೇ ಕಳುಹಿಸಿದಂಥ ಯೋಜನೆಗಳು ಅಲ್ಲಿ ಹತ್ತೆಂಟು ವರ್ಷ ಪೆಂಡಿಂಗ್‌ನಲ್ಲಿವೆ. ಅದಕ್ಕಾಗಿ, ಸರ್ಕಾರ ಅದಕ್ಕೆ ವಿಶೇಷ ಅನುದಾನ ಕೊಟ್ಟು, ಮುಂದಿನ ಬಜೆಟ್ ಅಂದರೆ 2005-06ರ ಸಾಲಿನಲ್ಲಿ ಸುಮಾರು 20 ಕೋಟಿ ರೂಪಾಯಿಗಳನ್ನು ಒದಗಿಸಿ ಸವಳು-ಜವಳನ್ನು ತೆಗೆಯಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಆ ಕೆಲಸದಲ್ಲಿ ಇನ್ನೇನಾಗಿದೆ ಎಂದರೆ, ಹಳೆಯ ಪದ್ಧತಿ ಪ್ರಕಾರ ಓಪನ್ ಡ್ರೈನೇಜ್ ಮಾಡಿ ಸವಳು ತೆಗೆಯಲಿಕ್ಕೆ ಹೋಗುತ್ತಾರೆ. ಅದರಿಂದ ಸಾಧ್ಯವಾಗುವುದಿಲ್ಲ. ಆ ಮಣ್ಣು ಪುನಃ ಅದೇ ತಗ್ಗಿನಲ್ಲಿ ಬಿದ್ದು ಮುಚ್ಚಿಹೋಗಿ ಕೆಲಸ ಸರಿಯಾಗಿ ಆಗುವುದಿಲ್ಲ. ರೈತರು ತಿಳುವಳಿಕೆ ಇಲ್ಲದೆ ನಾಲೆಗಳನ್ನು ಒತ್ತುವರಿ ಮಾಡಿಕೊಂಡು ಮುಚ್ಚಿಬಿಟ್ಟಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಆ ನಾಲೆಗಳನ್ನು ಪುನಃ ಓಪನ್‌ಮಾಡಿ ಡ್ರೈನೇಜ್ ಮಾಡಿದರೆ ಶಾಶ್ವತವಾದ ಕೆಲಸವಾಗುತ್ತದೆ. ಅದರ ಜೊತೆಯಲ್ಲಿ ಸಬ್ ಸರ್‌ಫೇಸ್ ಡ್ರೈನೇಜನ್ನು ಕೂಡ ಇಂಟರ್ನಲಿ ಮಾಡಬೇಕಾಗುತ್ತದೆ. ಆ ರೀತಿಯಾಗಿ ಮಾಡಿದರೆ ಶಾಶ್ವತವಾಗಿ ಈ ಸವಳು-ಜವಳು ಹೋಗುತ್ತದೆ. ಅದಕ್ಕಾಗಿ, ಮುಧೋಳ ತಾಲ್ಲೂಕಿನಲ್ಲಿ ಮೊಟ್ಟಮೊದಲನೆಯ ಆಧ್ಯತೆಯಾಗಿ 38 ಕಿ.ಮೀ. ಇರುವಂಥ ಪ್ರಮುಖ ನಾಲೆಗಳನ್ನು ಓಪನ್ ಮಾಡುವಂಥ ಕೆಲಸವನ್ನು ಮಾಡಬೇಕು. ಆ ನಾಲೆಗಳನ್ನು ಓಪನ್ ಮಾಡಲಿಕ್ಕೆ ಪ್ರತಿ ಕಿಲೋಮೀಟರ್‌ಗೆ ಸುಮಾರು 13 ಲಕ್ಷ ರೂಪಾಯಿಗಳ ಖರ್ಚು ಸರ್ಕಾರಕ್ಕೆ ಬರುತ್ತದೆ. ಅದಕ್ಕೆ ಮುಂದಿನ ಬಜೆಟ್‌ನಲ್ಲಿ 17-18 ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ಕೊಟ್ಟು ಕೆಲಸ ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಹಾಗೆಯೇ ನಾಲಾ ಒತ್ತುವರಿ ಮಾಡಿಕೊಳ್ಳದ ಹಾಗೆ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ನೋಡಿಕೊಳ್ಳಲಿಕ್ಕೆ ಕೂಡ instructions ಕೊಡಬೇಕು. ಕೃಷಿ ಇಲಾಖೆಯವರಿದ್ದಾರೆ, ನೀರಾವರಿ ಇಲಾಖೆಯವರಿದ್ದಾರೆ ಅವರೆಲ್ಲರಿಗೂ ಸಹ ಒಂದು ಆದೇಶವನ್ನು ಸರ್ಕಾರ ಹೊರಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ನಿಜವಾಗಿಯೂ ಈ ಕಾಡಾ ವ್ಯಾಪ್ತಿಯಲ್ಲಿ ಬರತಕ್ಕಂಥ ಅನೇಕ ತಾಲ್ಲೂಕುಗಳಲ್ಲಿ ಈ ಸಮಸ್ಯೆ ಇದೆ. ಮುಧೋಳದಲ್ಲಿ ಅವರು ಹೇಳಿದ ಹಾಗೆ, ನನ್ನಲಿರತಕ್ಕಂಥ ಮಾಹಿತಿ ಪ್ರಕಾರ 4489 ಹೆಕ್ಟೇರ್‌ನಲ್ಲಿ ಈ ಸಮಸ್ಯೆ ಇದೆ. ಅದಕ್ಕೆ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ಹಣದ ಅಭಾವದಿಂದ ಕೇವಲ 154 ಹೆಕ್ಟೇರ್ ಪ್ರದೇಶವನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಆಯಿತು.

ಕೇವಲ 28 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಆದ್ದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ನಮಗೂ ಕೂಡ ಗೊತ್ತಿದೆ. ಅದಕ್ಕೆ ಸಮಗ್ರವಾಗಿ ಕಾಡಾ, ಘಟಪ್ರಭಾ, ಮಲಪ್ರಭಾ, ಅದೇ ರೀತಿಯಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಳಗೆ ಇರತಕ್ಕಂಥದ್ದು ಮತ್ತು ತುಂಗಭದ್ರಾ ಪ್ರಾಜೆಕ್ಟ್‌ಗಳ ಕೆಳಗಿರತಕ್ಕಂಥದ್ದು, ಹೀಗೆ ಇವೆಲ್ಲವನ್ನೂ ಸೇರಿಸಿ ಒಂದು ಸವಿಸ್ತಾರವಾಗಿ ಅಭ್ಯಾಸ ಮಾಡಿ ಇದನ್ನು ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಮುಧೋಳ ಬಗ್ಗೆ ಮತ್ತು ಈ ನಮ್ಮ ಮಲಪ್ರಭಾ ಘಟಪ್ರಭಾ ಸಂಬಂಧಪಟ್ಟಂತೆ ತಾಲ್ಲೂಕುಗಳ ಬಗ್ಗೆ ಒಂದು ಪ್ರೊಜೆಕ್ಷನ್ ಅನ್ನು ಕೊಟ್ಟಿದ್ದೇವೆ. ಆದರೆ ಅವರು ಹೇಳಿದ ಹಾಗೆ ಅಲ್ಲಿ ಕೇಂದ್ರದವರೂ ಸಹ ಕೊಡುತ್ತಿಲ್ಲ. ಏಕೆಂದರೆ 50 ಪರ್ಸೆಂಟ್‌ನಷ್ಟು ಹಣ ನಾವು ಕೊಡಬೇಕು. ಇನ್ನು 50 ಪರ್ಸೆಂಟ್ ಕೇಂದ್ರದವರು ಕೊಡಬೇಕಾಗುತ್ತದೆ. ಆದರೆ ಇತ್ತೀಚೆಗೆ ಮತ್ತೊಂದು ಕಂಡಿಶನ್ ಹಾಕಿದ್ದಾರೆ. ಆ 50 ಪರ್ಸೆಂಟ್‌ನಲ್ಲಿ ಪುನಃ 10 ಪರ್ಸೆಂಟ್ ಹಣವನ್ನು ಫಲಾನುಭವಿಗಳು ಹಾಕಬೇಕೆಂದು ಹೇಳಿದ್ದಾರೆ. ಈಗಾಗಲೇ ಸರ್ವೇಸಾಮಾನ್ಯ ಕೆಲಸಕ್ಕೆ ಯಾರೂ ಹಣ ಕೊಡುವುದಿಲ್ಲ. ಈ ಸವಳು ಜಮೀನನ್ನು ಮತ್ತು alkaline land ಅನ್ನು ಸರಿಪಡಿಸಬೇಕೆಂದರೆ ಬಹುಶಃ ಇದಕ್ಕೆ ರೈತರು ಹಣ ಕೊಟ್ಟು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಸರ್ಕಾರವೇ ಇದನ್ನು ಯಾವ ರೀತಿಯಾಗಿ ವಹಿಸಿಕೊಳ್ಳಬೇಕೆನ್ನುವುದು ಒಂದು ಚಿಂತನೆಯಾಗಿದೆ. ಆದರೂ ಇದಕ್ಕೆ ಹೆಚ್ಚಿನ ಹಣ ಬೇಕು. ಈಗ ಕೇವಲ ಮುಧೋಳ ಒಂದೇ ಒಂದು, ಈ ತಾಲ್ಲೂಕಿನಲ್ಲಿ ನಾವು ಉಳಿದಂಥ ಜಮೀನು ಸುಮಾರು 4334 ಹೆಕ್ಟೇರ್ ಸರಿಪಡಿಸಬೇಕಾದರೆ 17 ಕೋಟಿ 33 ಲಕ್ಷ ರೂಪಾಯಿಗಳು ಬೇಕು. ನಾವು ಎಲ್ಲಾ ಹಾಕಿಕೊಂಡರೆ ಸುಮಾರು 36-37 ಕೋಟಿ ರೂಪಾಯಿಗಳನ್ನು ಇದಕ್ಕೆ ಒದಗಿಸಬೇಕಾಗುತ್ತದೆ. ಅದಕ್ಕೆ ಇದರಲ್ಲಿ ಎಷ್ಟು ಸಾಧ್ಯವಾಗುತ್ತದೆ ಅದನ್ನು ನಾನು ಆರ್ಥಿಕ ಇಲಾಖೆಗೆ ಮನವಿ ಮಾಡಿಕೊಂಡು ಆದಷ್ಟು ಹೆಚ್ಚಿನ ಹಣವನ್ನು ವಿಶೇಷವಾಗಿ ಮುಧೋಳ ತಾವು ಹೇಳಿದ ಹಾಗೆ ಅದೇ ರೀತಿ ಬಾಗಲಕೋಟೆಯಲ್ಲೂ ಈ ಸಮಸ್ಯೆ ಇದೆ ಮತ್ತು ವಿಶೇಷವಾಗಿ ನಮ್ಮ ಬೆಳಗಾಂನಲ್ಲೂ ಕೂಡ ಈ ಸಮಸ್ಯೆ ಇದೆ, ಇದೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಎಲ್ಲಿ ಹೆಚ್ಚು ಜಮೀನಿಗೆ ಈ ಒಂದು ಸಲಿನಿಟಿ ಮತ್ತು ಅಲ್ಕಲಿನಿಟಿ ಬರುತ್ತದೆ ಅಲ್ಲಿಗೆ ಹೆಚ್ಚಿನ ಹಣವನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆ ಮತ್ತು ಉಳಿದ ಏನಾದರೂ ಸಮಸ್ಯೆ ಇದ್ದರೆ ತಮಗೆ ಸಮಯವಿದ್ದರೆ, ತಾವು ಬಂದು ಬೇಕಾದರೆ ಚರ್ಚೆ ಮಾಡಬಹುದು. ನಮ್ಮ ಅಧಿಕಾರಿಗಳೂ ಕೂಡ ಇರುತ್ತಾರೆ. ಸಂಬಂಧಪಟ್ಟ ಯಾವ ಅಧಿಕಾರಿಗೆ ನಿರ್ದೇಶನ ಕೊಡಬೇಕೋ ಅದನ್ನು ಬೇಕಾದರೆ ಕೊಡಿಸೋಣ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರಿಗೆ, ಮುಧೋಳ ತಾಲ್ಲೂಕು ಪ್ರಕಾರ, ನಮ್ಮ ಜಮಖಂಡಿ ತಾಲ್ಲೂಕಿನಲ್ಲಿಯೂ ಹತ್ತಾರು ಸಾವಿರ ಎಕರೆ ಸವಳು-ಜವಳಿನಿಂದ ಫಲವತ್ತಾದ ಜಮೀನು ಹಾಳಾಗುವ ಪರಿಸ್ಥಿತಿ ಇದೆ. ಈ ಸವಳು-ಜವಳು ಪ್ರತಿ ವರ್ಷವೂ ಹಂತ ಹಂತವಾಗಿ ಫಲವತ್ತಾದ ಜಮೀನನ್ನು ಕಬಳಿಸುತ್ತಾ ಬಂದಿದೆ. ಇದಕ್ಕೆ ಸರ್ಕಾರದ ಮಟ್ಟದಲ್ಲಿ ಯಾವುದಾದರೊಂದು ಉಪಯುಕ್ತವಾದ ಯೋಜನೆ ಮೂಲಕ ಹಣವನ್ನು ಬಿಡುಗಡೆ ಮಾಡಿ ಆ ಫಲವತ್ತಾದ ರೈತರ ಜಮೀನನ್ನು ಉಳಿಸಿಕೊಡಬೇಕು. ಈಗಾಗಲೇ ಎಸ್‌ಜಿಆರ್‌ವೈನಲ್ಲಿ ಪ್ರತಿ ಪಂಚಾಯಿತಿಗೆ ಒಂದು ಲಕ್ಷ ಹಣವನ್ನು ಜಲ ಸಂರಕ್ಷಣೆ ಸಲುವಾಗಿ ಉಪಯೋಗ ಮಾಡುವಂಥ ಪರಿಸ್ಥಿತಿ ಇದೆ. ಆದರೆ, ವಿಚಿತ್ರವೆಂದರೆ, ಎಲ್ಲಿ ಸವಳು-ಜವಳು ಜಮೀನುಗಳಿದ್ದ ಊರುಗಳಿವೆ, ಅಲ್ಲಿ ಜಲ ಸಂರಕ್ಷಣೆ ಅವಶ್ಯಕತೆ

ಇರುವುದಿಲ್ಲ. ಅಂಥ ಕಡೆ ಲಕ್ಷ, 2 ಲಕ್ಷಗಟ್ಟಲೆ ಜಲ ಸಂರಕ್ಷಣೆ ನೆಪದಲ್ಲಿ ಹಣ ಹಾಳಾಗುವ ಪರಿಸ್ಥಿತಿ ಇದೆ. ಆ ಜಲ ಸಂರಕ್ಷಣೆಯನ್ನು ಬದಲಾವಣೆ ಮಾಡಿ, ಎಲ್ಲಿ ಸವಳು-ಜವಳು ಜಮೀನಿದೆ, ಅಂಥ ಊರುಗಳಲ್ಲಿ, ಆ ಸವಳು-ಜವಳು ತೆಗೆಯುವಂಥ ನಾಲೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಅಥವಾ ಒಳಚರಂಡಿ ಮಾಡಲು ಆ ಹಣವನ್ನು ಉಪಯೋಗ ಮಾಡಿದರೆ ಆ ಫಲವತ್ತಾದ ಜಮೀನನ್ನು ಸ್ವಲ್ಪವಾದರೂ ಉಳಿಸಲು ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ನನ್ನ ತಾಲ್ಲೂಕಿನಲ್ಲಿ ವಿಶೇಷವಾಗಿ ಹೇಳಬೇಕಾದರೆ, ಹತ್ತಾರು ಹಳ್ಳಿಗಳು ನೂರಕ್ಕೆ 90ರಷ್ಟು ಜಮೀನುಗಳು ಸವಳು-ಜವಳಿನಿಂದ ಒಕ್ಕಲುತನವನ್ನೇ ನಿಲ್ಲಿಸುವ ಧಾರುಣ ಸ್ಥಿತಿ ಇದೆ. ಅದಕ್ಕಾಗಿ ಸರ್ಕಾರ ತೀವ್ರವಾದ ಗಮನವನ್ನು ಆ ಕಡೆ ಕೊಟ್ಟು ಆ ಜಮೀನನ್ನು ಉಳಿಸಿಕೊಡುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾರಜೋಳರವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. ಈ ಸಮಸ್ಯೆ ಇಲ್ಲವೆಂದಲ್ಲ. ಇದೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನಾನು ಈಗಾಗಲೇ ಹೇಳಿದ ಹಾಗೆ, ಕೇವಲ 100 ಕೋಟಿ ರೂಪಾಯಿ ನಮ್ಮ ಮಲಪ್ರಭಾ ಮತ್ತು ಘಟಪ್ರಭಾ ಈ ಕಾಡಾಗಳಿಗೇ ಬೇಕಾಗುತ್ತದೆ. ಉಳಿದ ನಮ್ಮ ಅಪ್ಪರ್‌ಕೃಷ್ಣ ಮತ್ತು ತುಂಗಭದ್ರಾ ಈ ಕಾಡಾಗಳಿಗೆ ರೆಸ್ಪೆಕ್ಟೀವ್ಲಿ 152 ಕೋಟಿ ರೂಪಾಯಿ ಅಪ್ಪರ್‌ಕೃಷ್ಣಗೆ ಮತ್ತು ಸುಮಾರು 36 ಕೋಟಿ ರೂಪಾಯಿ ತುಂಗಭದ್ರಾಗೆ ಬೇಕಾಗುತ್ತದೆ. ಅಂದರೆ, ಟೋಟಲಿ 200 ಕೋಟಿ ರೂಪಾಯಿಗಳ ಮೇಲ್ಪಟ್ಟು ಹಣ ಬೇಕಾಗುತ್ತದೆ. ಆದರೆ, ನಾವು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ಪ್ರಯತ್ನ ಮಾಡಿದರೂ ಕೂಡ, ಈ ಒಂದು ಕೆಲಸಕ್ಕೆ ಹೆಚ್ಚಿನ ಹಣ ಇಲ್ಲ. ಅದಕ್ಕೆ ತಾವು ಹೇಳಿದಿರಿ ಮತ್ತು ಕಾರಜೋಳರವರ ಉದ್ದೇಶ ಕೂಡ ಅದೇ ಇದೆ. ಇದಕ್ಕೆ ಹೆಚ್ಚಿನ ಹಣ ಕೊಡಿಸಿ, ಈ ಸಮಸ್ಯೆ ಎಲ್ಲಿದೆ, ಅಲ್ಲಿ ಆದಷ್ಟು ಅದನ್ನು ಬಗೆಹರಿಸಬೇಕು, ಇಲ್ಲದಿದ್ದರೆ, ಶಾಶ್ವತವಾಗಿ ಆ ರೈತರ ಜಮೀನುಗಳು ಕೆಟ್ಟು ಹೋಗುತ್ತವೆ ಎನ್ನುವ ಪ್ರಸ್ತಾಪವನ್ನು ಅವರು ಮಾಡಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಆದರೆ, ಹಣದ ಕೊರತೆ ಇದ್ದ ಕಾರಣ, ತಕ್ಷಣ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಎಷ್ಟು ಹೆಚ್ಚಿನ ರೀತಿಯಲ್ಲಿ ನಾವು ತೆಗೆದುಕೊಳ್ಳಬಹುದೋ, ಅಷ್ಟು ನಾನು ಪ್ರಯತ್ನ ಮಾಡುತ್ತೇನೆ.

ಐ.ಪಿ.ಡಿ. ಸಾಲಪ್ಪನವರ ವರದಿ ಅನುಷ್ಠಾನ

29 (432) : ಶ್ರೀ ಅಂಜನೇಯ ಹೆಚ್. (ಭರಮಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಐ.ಪಿ.ಡಿ. ಸಾಲಪ್ಪನವರ ವರದಿಯನ್ನು ಸರ್ಕಾರ ಅಂಗೀಕರಿಸಿರುವುದೆ;
2) ಹಾಗಿದ್ದಲ್ಲಿ ಈ ವರದಿಯಲ್ಲಿರುವ ಶಿಫಾರಸ್ಸುಗಳು ಯಾವುವು;
3) ಈ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ;
4) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

1) ಹೌದು.
2) ಪ್ರಮುಖ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ನೀಡಿದೆ.